



# 2 ತಲೆ ಆಮೆ



ಏಳು ವಾರ ವಯಸ್ಸಿನ ಈ ಆಮೆಗೆ ಎರಡು ತಲೆ ಹಾಗೂ ಐದು ಕಾಲುಗಳಿವೆ. ಕ್ರೋಮೋಜೋಮ್ ವೈಪರೀತ್ಯದಿಂದಾಗಿ ಇಂಥ ಅಪರೂಪದ ವಿರೂಪಿ ಜೀವಿಗಳು ಹುಟ್ಟುತ್ತವೆ ಎಂಬುದು ಜೀವವಿಜ್ಞಾನಿಗಳ ಅಭಿಪ್ರಾಯ.

ಸ್ಲೋವಾಕಿಯಾ ದೇಶದ ಜಿಲೀನಾದಲ್ಲಿರುವ ಈ ಪುಟ್ಟ ಆಮೆ ಮನುಷ್ಯನ ಅಂಗೈಯಲ್ಲಿ ಅರಾಮಾಗಿ ಕುಳಿತುಕೊಳ್ಳಬಲ್ಲದು. ಇದನ್ನು ನಮ್ಮ ಎರಡೇ ಬೆರಳುಗಳಲ್ಲಿ ಹಿಡಿದೆತ್ತಬಹುದು. ಈ ಚಿಕ್ಕ ಆಮೆ ಮುಂದೆ ಬಹು ದೊಡ್ಡದಾಗಿ ಬೆಳೆಯಬಲ್ಲದು. ಈ ಜಾತಿಯ ಆಮೆಗಳು ಪ್ರೌಢಾವಸ್ಥೆಗೆ ಬಂದಾಗ 18 ಅಂಗುಲ ಉದ್ದವಾಗಿ, 32 ಕಿಲೋ ತೂಗುತ್ತವೆ. ಇನ್ನೂ ಕೆಲವು ದೊಡ್ಡ ಆಮೆಗಳು 24 ರಿಂದ 36 ಅಂಗುಲಗಳವರೆಗೆ ಬೆಳೆದು, 70 ಕಿಲೋ ತೂಕ ಹೊಂದಬಹುದು. ಜಗತ್ತಿನ ಅತಿ ದೊಡ್ಡ ಆಮೆಗಳಲ್ಲಿ ಇವುಗಳಿಗೆ ಮೂರನೆಯ ಸ್ಥಾನವಂತೆ! ಭೂಮಿಯ ಮೇಲೆ ವಾಸಿಸುವ ಆಮೆಗಳಲ್ಲಿ ಈ ಜಾತಿಯ ಆಮೆಗಳೇ ಅತಿ ದೊಡ್ಡವಂತೆ!

ಹುಟ್ಟಿದಾಗ ಕೇವಲ 2–3 ಅಂಗುಲದಷ್ಟೇ ಇರುವ ಈ ಆಮೆ ಮರಿಗಳು ಮೊದಲ ವರ್ಷವೇ 6–10 ಅಂಗುಲದಷ್ಟು ಬೆಳೆದು ಬಿಡುತ್ತವೆ. ಇವುಗಳ ಜೀವಿತಾವಧಿ 30 ರಿಂದ 50 ವರ್ಷ. ಈಜಿಪ್ಟಿನ ಗಿಝಾ ಪ್ರಾಣಿ ಸಂಗ್ರಹಾಲಯದಲ್ಲಿ ಈ ಜಾತಿಯ ಒಂದು ಆಮೆ 54 ವರ್ಷ ಬದುಕಿದ ದಾಖಲೆ ಇದೆ.

ಉತ್ತರ ಆಫ್ರಿಕಾದ ಸಹರಾ ಮರುಭೂಮಿಯ ದಕ್ಷಿಣ ತುದಿಯಲ್ಲಿ ಹೆಚ್ಚಾಗಿ ಈ ಜಾತಿಯ ಆಮೆಗಳು ಕಂಡುಬರುತ್ತವೆ. ಅಂದ ಹಾಗೆ, ಈ ಎರಡು ತಲೆಯ ಆಮೆಗೆ ಜಿಲೀನಾದ ಇದರ ರಕ್ಷಕರು ಎರಡು ಹೆಸರುಗಳನ್ನು ಇಟ್ಟಿದ್ದಾರೆ. ಎಡ ತಲೆಗೆ ‘ಮಗ್ಡಾ’ ಹಾಗೂ ಬಲ ತಲೆಗೆ ‘ಲೆಂಕಾ’ ಎನ್ನುವುದು ಅವರಿಟ್ಟ ಹೆಸರು.

■ ಸುಭಾಸ ಯಾದವಾಡ